ಕ್ರಮ ಸಂಖ್ಯೆ	ಜಿಲ್ಲಾ ಪಂಚಾಯತ್	ಕೊರೆದಿರುವ ಕೊಳವೆ ಬಾವಿಗಳ ಒಟ್ಟು ಸಂಖ್ಯೆ	ಸಫಲ	ವಿಫಲ
1	ಬೆಂಗಳೂರು (ಗ್ರಾ)	290	241	49
2	ಬೆಂಗಳೂರು (ನ)	416	358	58
3	ದಾವಣಗೆರೆ	38	28	10
4	ಕೋಲಾರ	784	610	174
5	ಶಿವಮೊಗ್ಗ	29	27	2
6	ತುಮಕೂರು	184	165	19
7	ಚಿತ್ರದುರ್ಗ	321	272	49
8	ಚಾಮರಾಜನಗರ	124	124	0
9	ಮೈಸೂರು	58	53	5
10	ಮಂಡ್ಯ	165	165	0
11	ಚಿಕ್ಕಮಗಳೂರು	213	179	34
12	ಹಾಸನ	73	65	8
13	ಬಾಗಲಕೋಟೆ	263	253	10
14	ಬೆಳಗಾವಿ	163	127	36
15	ಬಿಜಾಪುರ	199	183	16
16	ಧಾರವಾಡ	53	47	6
17	ಗದಗ	120	117	3
18	ಹಾವೇರಿ	274	245	29
19	ಉತ್ತರ ಕನ್ನಡ	50	45	5
20	ಬಳ್ಳಾರಿ	374	336	38
21	ಬೀದರ್	88	79	9
22	ಗುಲ್ಬರ್ಗಾ	171	146	25
23	ಕೊಪ್ಪಳ	43	43	0
24	ರಾಯಚೂರು	82	82	0
	ಒಟ್ಟು	4575	3990	585

ರಾಜ್ಯದಲ್ಲಿ ಭಾಷಾ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು

2921 (3291) : ಶ್ರೀ ಹೊನ್ನಳ್ಳಿ ಜಬ್ಬರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಭಾಷಾ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಿರುತ್ತವೆ; ಜಿಲ್ಲಾವಾರು ವಿವರ ನೀಡುವುದು;

ಆ) ಈ ಸಂಸ್ಥೆಗಳಿಗೆ ವಿಶೇಷ ಸ್ಥಾನಮಾನ ನೀಡಲು ಸರ್ಕಾರ ಕೈಗೊಂಡ ಕ್ರಮವೇನು;

ಇ) ಸದರಿ ಸಂಸ್ಥೆಗಳಿಂದ ನಡೆಸಲ್ಪಡುವ ಪ್ರಾಥಮಿಕ, ಪ್ರೌಢ, ವೃತ್ತಿ ಶಿಕ್ಷಣ, ದಂತ, ವೈದ್ಯಕೀಯ, ತಾಂತ್ರಿಕ ಶಾಲಾ ಕಾಲೇಜುಗಳೆಷ್ಟು; ಜಿಲ್ಲಾವಾರು ವಿವರ ನೀಡುವುದು?

ಶ್ರೀ ಪ್ರೊ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ರಾಜ್ಯದಲ್ಲಿ ಒಟ್ಟು 129 ಭಾಷಾ ಅಲ್ಪ ಸಂಖ್ಯಾತ ಶಿಕ್ಷಣ ಸಂಸ್ಥೆಗಳಿವೆ.

ಆ) (i) ಸದರಿ ಶಾಲೆಗಳಲ್ಲಿ ನೇಮಕಾತಿ ಮಾಡುವಾಗ ಮತ್ತು ಬಡ್ತಿ ನೀಡುವಾಗ ಮೀಸಲು ನೀತಿಯನ್ನು ಅನುಸರಿಸಬೇಕಾಗಿರುವುದಿಲ್ಲ.

ii.ಭಾಷಾ ಅಲ್ಪಾ ಸಂಖ್ಯಾತ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ಸಾಮರ್ಥ್ಯದ ಶೇಕಡ 50 ರಷ್ಟು ಸೀಟುಗಳನ್ನು ಭರ್ತಿ ಮಾಡಿಕೊಳ್ಳಬಹುದಾಗಿದೆ.

ಇ) ಈ ಸಂಸ್ಥೆಗಳಿಂದ 242 ಪ್ರಾಥಮಿಕ ಶಾಲೆಗಳು, 165 ಪ್ರೌಢ ಶಾಲೆಗಳು ಮತ್ತು 22 ಕಿರಿಯ ಕಾಲೇಜುಗಳು, ಮತ್ತು 7 ವೈದ್ಯಕೀಯ, 10 ದಂತ, 1 ಫಾರ್ಮಸಿ, 4 ನರ್ಸಿಂಗ್ ಮತ್ತು 4 ಪಿಜಿಯೋಥೆರಪಿ ಕಾಲೇಜುಗಳು ನಡೆಯುತ್ತಿವೆ. ಜಿಲ್ಲಾವಾರು ವಿವರ ಅನುಬಂಧದಲ್ಲಿ ನೀಡಲಾಗಿದೆ.

ರಾಜ್ಯದಲ್ಲಿ ಮೇವಿನ ಕೊರತೆ ನಿವಾರಿಸಲು ಕ್ರಮ

3059 (3584) : ಶ್ರೀ ಆತ್ಮಾನಂದ .ಎಂ.ಎಸ್ (ಮಂಡ್ಯ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿನ ಬರಗಾಲ ಪರಿಸ್ಥಿತಿಯಿಂದಾಗಿ ಮೇವಿನ ಕೊರತೆ ಉಂಟಾಗಿದೆಯೇ?

ಆ) ಹಾಗಿದ್ದಲ್ಲಿ, ಮೇವಿನ ಕೊರತೆಯನ್ನು ನಿವಾರಿಸಲು ಸರಕಾರವು ಕೈಗೊಂಡಿರುವ ಕ್ರಮಗಳೇನು;

ಇ) ಮೇವು ಬ್ಯಾಂಕ್‌ಗಳನ್ನೇನಾದರೂ ತೆರೆಯುವ ಪ್ರಸ್ತಾವನೆ ಸರ್ಕಾರಕ್ಕಿದೆಯೇ;

ಈ) ಇದ್ದಲ್ಲಿ ಇದರ ಬಗೆಗಿನ ವಿವರಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು):

ಅ) ಹೌದು

ಆ) ಮೇವಿನ ಕೊರತೆ ನಿವಾರಿಸಲು ಸರ್ಕಾರವು ಬಿಡುಗಡೆ ಮಾಡಿದ ಅನುಧಾನ ಈ ಕೆಳಕಂಡಂತೆ ಇದೆ.

	ರೂ.ಲಕ್ಷಗಳಲ್ಲಿ
1. ಮೇವು ಸಾಗಾಣಿಕೆಗೆ	48.00
2. ಮಿನಿಕಿಟ್ ಕಾರ್ಯಕ್ರಮ	100.00
3. ಸರ್ಕಾರಿ ಫಾರಂಗಳಲ್ಲಿ ಮೇವು ಬೆಳೆಯಲು	227.00
4. ಮೇವಿನಬ್ಯಾಂಕ್:ಗೋಶಾಲೆ ಗಳನ್ನು ತೆರೆಯುವ ಬಗ್ಗೆ	300.00
5. ಔಷಧಿ ಖರೀದಿ	300.00

19 ಮೇವು ಬ್ಯಾಂಕ್‌ಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ಸ್ಥಾಪಿಸಲಾಗಿದೆ.